ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU

# ಲೋಕೋಪಯೋಗಿ ಇಲಾಖೆ ಸಾಧನೆ



ಪ್ರತಿಯೊಂದು ಚಟುವಟಿಕೆಗೂ ರಸ್ತೆಗಳೇ ಪ್ರಮುಖ ಮಾಧ್ಯಮ. ಅದರಲ್ಲೂ ಅಂತಾರಾಜ್ಯ ಸಂಪರ್ಕ ಬೆಸೆಯುವ ಹೆದ್ದಾರಿಗಳು ಮೂಲಜೀವಾಳ. ರಸ್ತೆಗಳೆಂದರೆ ಕೇವಲ ದಾರಿಗಳಲ್ಲ. ಪ್ರಗತಿಯ ಪಥ ಎಂಬ ಧ್ಯೇಯೋದ್ದೇಶದೊಂದಿಗೆ ಲೋಕೋಪಯೋಗಿ ಇಲಾಖೆ ರಾಜ್ಯದ ಪ್ರಮುಖ ರಸ್ತೆ ಮತ್ತು ಹೆದ್ದಾರಿಗಳ ದುರಸ್ಥಿ, ವಿಸ್ತರಣೆ ಮತ್ತು ಪುನರ್‌ನಿರ್ಮಾಣದ ಕೆಲಸಕ್ಕೆ ಆದ್ಯತೆ ನೀಡಿದೆ. ಈ ಕುರಿತ ಒಂದು ಪಕ್ಷಿನೋಟ ಇಲ್ಲಿದೆ.



ನರೇಂದ್ರ ಮೋದಿ
ಪ್ರಧಾನ ಮಂತ್ರಿಗಳು

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿಗಳು



ಕೇಂದ್ರದ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಲ್ಲಿ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ಹಾಗೂ ಸಚಿವರಾದ ಶ್ರೀ ಸಿ.ಸಿ.ಪಾಟೀಲ ಅವರು ಕರ್ನಾಟಕದ ಹೆದ್ದಾರಿ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆ ಮಾಡಲಾದ ಮನವಿಗೆ ಸಕಾರಾತ್ಮಕ ಸ್ಪಂದನೆ.

# ಹೆದ್ದಾರಿಗಳೆಂದರೆ ಪ್ರಗತಿಯ ವೇಗವರ್ಧಕ



## ವಿ ಸಂದರ್ಶನ

**ಸಿ.ಸಿ. ಪಾಟೀಲ**
ಲೋಕೋಪಯೋಗಿ ಸಚಿವ

**■ ಇಲಾಖೆಯ ಆದ್ಯತೆ ಏನು?**

ಪ್ರತಿ ಚಟುವಟಿಕೆಗಳಿಗೂ ರಸ್ತೆಗಳು ಮತ್ತು ಹೆದ್ದಾರಿಗಳೇ ಪ್ರಮುಖ ಮಾಧ್ಯಮಗಳಾಗಿವೆ. ಒಂದರ್ಥದಲ್ಲಿ ರಸ್ತೆಗಳೆಂದರೆ ಅವು ಕೇವಲ ದಾರಿಗಳಲ್ಲ. ಪ್ರಗತಿಯ ಪಥ. ಆದ್ದರಿಂದ ನಮ್ಮ ಸರ್ಕಾರ ಲೋಕೋಪಯೋಗಿ ಇಲಾಖೆ ಮೂಲಕ ರಸ್ತೆ ಮತ್ತು ಹೆದ್ದಾರಿಗಳ ದುರಸ್ಥಿ, ವಿಸ್ತರಣೆ ಮತ್ತು ಪುನರ್ ನಿರ್ಮಾಣದ ಕೆಲಸಕ್ಕೆ ಆದ್ಯತೆ ನೀಡುತ್ತಿದೆ.

**■ ಹಣಕಾಸಿನ ಕೊರತೆ ಕಾಡಿಲ್ಲವೇ, ಕೋವಿಡ್ ಮತ್ತು ಪ್ರಕೃತಿ ವಿಕೋಪದ ಕಾರಣದಿಂದ..**

2021ರಲ್ಲಿ ಸುಮಾರು 4 ತಿಂಗಳ ಕಾಲ ರಾಜ್ಯದ ವಿವಿಧ ಭಾಗಗಳಲ್ಲಿ ಸುರಿದ ಭಾರಿ ಮಳೆಯಿಂದ ಅನೇಕ ರಸ್ತೆಗಳು ಮತ್ತು ಸೇತುವೆಗಳು ಶಿಥಿಲವಾಗಿವೆ. ಹಲವು ಸರ್ಕಾರಿ ಕಟ್ಟಡಗಳು ಹಾನಿಗೆ ಒಳಗಾಗಿವೆ. ಅವುಗಳ ದುರಸ್ತಿ ಮತ್ತು ಪುನರ್‌ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾರ್ಗದರ್ಶನದಲ್ಲಿ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಕೋವಿಡ್‌ನಿಂದ ಆರ್ಥಿಕ ಪರಿಸ್ಥಿತಿ ಮೇಲೆ ಪರಿಣಾಮ ಬೀರಿದ್ದರೂ ಗುರಿ ವಿಚಲಿತವಾಗಿಲ್ಲ.

**■ ಕಟ್ಟಡಗಳ ನಿರ್ಮಾಣದಲ್ಲಿ ವಿಶೇಷ ಉಪಕ್ರಮಗಳೇನು?**

ಇಲಾಖೆಯಿಂದ ನಿರ್ಮಿಸುತ್ತಿರುವ ಪ್ರತಿಯೊಂದು ಕಟ್ಟಡದ ಸುತ್ತಲೂ ಗಿಡ-ಮರಗಳನ್ನು ನೆಡುವ ಬಗ್ಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.

**■ ರಸ್ತೆ ಸುರಕ್ಷತೆಗೆ ಕ್ರಮವೇನು?**

ಅನೇಕ ಕಡೆಗಳಲ್ಲಿ ಅವೈಜ್ಞಾನಿಕ ರಸ್ತೆ ತಡೆಗಳನ್ನು ನಿರ್ಮಿಸಲಾಗಿದೆ. ಇದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಆದ್ದರಿಂದ ಅವುಗಳನ್ನು ನಿರ್ಮೂಲನೆ ಮಾಡಲಾಗುವುದು. ರಸ್ತೆ ಸುರಕ್ಷತೆ ನತ್ತು ಮಾರ್ಗದರ್ಶಿ ಫಲಕಗಳ ಅಳವಡಿಕೆ ಸೇರಿ ಅನೇಕ ಜನೋಪಯೋಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

**■ ರಸ್ತೆಗಳ ನಿರ್ಮಾಣದಲ್ಲಿ ಗುಣಮಟ್ಟ ಕಾಪಾಡಲು ನಿಮ್ಮ ಆದ್ಯತೆ...**

ರಾಜ್ಯದಲ್ಲಿ 7,589 ಕಿ.ಮೀ. ರಾಷ್ಟ್ರೀಯ ಹೆದ್ದಾರಿ, 27,811 ಕಿ.ಮೀ. ರಾಜ್ಯ ಹೆದ್ದಾರಿ, 56,131 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳಿವೆ. ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಜವಾಬ್ದಾರಿ ಲೋಕೋಪಯೋಗಿ ಇಲಾಖೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ್ದಾಗಿದೆ. ನಮ್ಮ ಹೆದ್ದಾರಿಗಳು ಸಕಲ ಸೌಲಭ್ಯಗಳೊಂದಿಗೆ ಅಂತಾರಾಷ್ಟ್ರೀಯ ಗುಣಮಟ್ಟ ಕಾಪಾಡಿಕೊಂಡು ಹೋಗಬೇಕೆಂಬ ನಿಟ್ಟಿನಲ್ಲಿ ಹತ್ತು ಹಲವು ಕ್ರಮಗಳನ್ನು ಕೈಗೊಂಡಿದ್ದೇವೆ.

**■ ರಸ್ತೆಗಳನ್ನು ಮೇಲ್ದರ್ಜೇಗೇರಿಸುವ ಬೇಡಿಕೆ ಬಗ್ಗೆ...**

ರಾಜ್ಯದಲ್ಲಿ ಇನ್ನೂ ಹಲವು ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೇಗೇರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರಕ್ರಿಯೆ ಆರಂಭಿಸಿವೆ. ಒಟ್ಟಾರೆ ದಿವಂಗತ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕನಸು ಕಂಡಂತೆ ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಉತ್ತಮ ಹೆದ್ದಾರಿ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಮುಂದಡಿ ಇಡುತ್ತಿದೆ. ಇದಕ್ಕೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಗೂ ಮುಖ್ಯಮಂತ್ರಿ ಅವರ ಪ್ರೋತ್ಸಾಹ ಸಹ ದೊರಕುತ್ತಿದೆ. ಇದರಿಂದಾಗಿ ಉತ್ತಮ ಗುಣಮಟ್ಟದ ಹೆದ್ದಾರಿ, ಅಪಘಾತರಹಿತ ಸಂಚಾರ ವ್ಯವಸ್ಥೆ ಜನತೆಗೆ ಸಿಕ್ಕರೆ ನಮ್ಮ ಪ್ರಯತ್ನ ಸಾರ್ಥಕ.

## ರಾಷ್ಟ್ರೀಯ ಹೆದ್ದಾರಿಗೆ ಆಧುನಿಕ ಸ್ಪರ್ಶ

- ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆ, ದುರಸ್ತಿ, ಅಗತ್ಯವಿದ್ದಲ್ಲಿ ಸರ್ವೀಸ್ ರಸ್ತೆ ನಿರ್ಮಾಣ, ಆಧುನಿಕ ಟೋಲ್ ವ್ಯವಸ್ಥೆ ಮುಂತಾದ ಅನೇಕ ಕೆಲಸ ಕಾರ್ಯಗಳಿಗೆ ಆದ್ಯತೆ. ಪ್ರಮುಖ ನಾಲ್ಕು ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಿಸಲು ಕೇಂದ್ರ ಸರ್ಕಾರಕ್ಕೆ ಈಗಾಗಲೆ ಮನವಿ ಮಾಡಿದ್ದು, ಈ ಬಗ್ಗೆ ಪರಿಶೀಲನೆಯಲ್ಲಿದೆ.

## ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP)

- **ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ-4, ಘಟ್ಟ-2ರಡಿ 3500 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ ಅನುಷ್ಠಾನಕ್ಕೆ ಅನುಮೋದನೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವಿಶೇಷ ಆಸಕ್ತಿಯಿಂದ ಸುಮಾರು 2272 ಕಿ.ಮೀ. ಪ್ರಮುಖ ರಸ್ತೆ ಅಭಿವೃದ್ಧಿಗೆ ಕ್ರಮ.**

## ಎಸ್‌ಆರ್ ದರ ಪರಿಷ್ಕರಣೆ

**ರಾಜ್ಯದಲ್ಲಿ ಏಕರೂಪ ದರ (ಎಸ್.ಆರ್. ದರ) ಏಕರೂಪ ವಾಗಿರಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದ್ದು, ಅದನ್ನು ಜಾರಿಗೆ ತರಲು ಇದೇ ಮೊದಲ ಬಾರಿಗೆ ಕ್ರಮ ಕೈಗೊಳ್ಳಲಾಗಿದೆ. ವಿವಿಧ ಇಲಾಖೆಯಲ್ಲಿ ಕೈಗೆತ್ತಿಕೊಳ್ಳುವ ಯಾವುದೇ ಕೆಲಸಗಳಿಗೆ ಎಸ್‌ಆರ್ ದರ ಒಂದೇ ರೀತಿ ಇದ್ದಲ್ಲಿ ತಾರತಮ್ಯ ಆಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ಶೀಘ್ರದಲ್ಲಿಯೇ ಏಕರೂಪ ದರ ಜಾರಿಗೆ ತರಲು ನಡೆಸಿರುವ ಎಲ್ಲ ಹಂತದ ಪ್ರಯತ್ನಗಳು ಅಂತಿಮ ಹಂತದಲ್ಲಿವೆ.**

## ರಸ್ತೆ ಎಂದರೆ ಅಭಿವೃದ್ಧಿ ರಹದಾರಿ

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಅತ್ಯುತ್ತಮ ರಸ್ತೆ ಜಾಲ ಆರ್ಥಿಕ ವ್ಯವಸ್ಥೆಯ ನರ-ನಾಡಿ ಇದ್ದಂತೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಯಲ್ಲಿ ರಸ್ತೆ, ಹೆದ್ದಾರಿ, ಸಂಪರ್ಕ ಸೇತುವೆ, ಸರ್ಕಾರಿ ಕಟ್ಟಡಗಳು ಸೇರಿ ಸಂಪರ್ಕ ಕಲ್ಪಿಸುವ ಮೂಲ ಸೌಕರ್ಯಗಳ ಕೊಡುಗೆ ಅಪಾರವಾದದ್ದು.

ರಾಜ್ಯ ಅಷ್ಟ ದಿಕ್ಕುಗಳಲ್ಲಿಯೂ ಬೆಳೆಯಬೇಕು. ಅಭಿವೃದ್ಧಿ ಹೊಂದಬೇಕು. ಅದಕ್ಕಾಗಿ ಸರಾಗ, ಸುಸೂತ್ರ ಮತ್ತು ಸುರಕ್ಷಿತವಾದ ಸಂಪರ್ಕ ಜಾಲವನ್ನು ನಿರ್ಮಿಸಲಾಗುತ್ತಿದೆ. ಈ ಗುರಿ ತಲುಪಲು ಅಗತ್ಯ ಪ್ರೋತ್ಸಾಹ ನಮ್ಮ ಸರ್ಕಾರದ ವತಿಯಿಂದ ನೀಡಲಾಗುತ್ತಿದೆ.



ಅತ್ಯುತ್ತಮ ರಸ್ತೆ ಜಾಲ ವ್ಯಾಪಾರ - ವಹಿವಾಟು ಅಭಿವೃದ್ಧಿಗೆ ಪೂರಕವಾಗಿದೆ. ಇಂತಹ ಜನಸ್ನೇಹಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಲೋಕೋಪಯೋಗಿ ಇಲಾಖೆಗೆ ಅಗತ್ಯ ಅನುದಾನವನ್ನು ಆದ್ಯತೆ ಮೇರೆಗೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ನಿರ್ವಹಣೆ ಕೆಲಸಗಳು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ನಡೆಯಬೇಕು. ಹೀಗಾಗಿ ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವರಾದ ನಿತಿನ್ ಗಡ್ಕರಿ ಅವರ ಸೂಕ್ತ ಮಾರ್ಗದರ್ಶನ ಮತ್ತು ಸಹಕಾರದಿಂದಾಗಿ ಗುಣಮಟ್ಟದ ಮತ್ತು ಆಧುನಿಕ ಸೌಲಭ್ಯದ ರಾಷ್ಟ್ರೀಯ ಹೆದ್ದಾರಿಗಳನ್ನು ಒದಗಿಸುವುದು ನಮ್ಮಿಂದ ಸಾಧ್ಯವಾಗಿದೆ. ಸಿ.ಸಿ. ಪಾಟೀಲ ಅವರಂತಹ ಹಿರಿಯ ಮತ್ತು ಅನುಭವಿ ಸಚಿವರು ಲೋಕೋಪಯೋಗಿ ಇಲಾಖೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಅವರ ದೂರದೃಷ್ಟಿಯ ಯೋಜನೆಗಳಿಂದಾಗಿ ಇಲಾಖೆಗೆ ಮತ್ತಷ್ಟು ಬಲ ಬಂದಂತಾಗಿದೆ. ಒಟ್ಟಾರೆ ನಮ್ಮ ರಾಜ್ಯದ ಪ್ರಗತಿಯ ತೇರು ನಾಗಾಲೋಟದಿಂದ ಸಾಗುವುದಕ್ಕೆ ನಮ್ಮ ರಸ್ತೆ, ಹೆದ್ದಾರಿಗಳೇ ವರದಾನ.

# ಸುಗಮ ಸಂಚಾರ ಸೇತು



## ಶಾಲೆ, ಅಂಗನವಾಡಿ ಕಟ್ಟಡಗಳ ನಿರ್ಮಾಣದಲ್ಲಿ ಹೊಸ ದಾಖಲೆ

- ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗ ದೊಂದಿಗೆ ₹756 ಕೋಟಿ ವೆಚ್ಚದಲ್ಲಿ 3423 ಪ್ರಾಥಮಿಕ-ಪ್ರೌಢಶಾಲೆ ಕಟ್ಟಡ ನಿರ್ಮಿಸುವ ಗುರಿ. ಈಗಾಗಲೆ 2814 ಕಾಮಗಾರಿ ಪೂರ್ಣ.
- 137 ಕೋಟಿ ರೂ. ವೆಚ್ಚದಲ್ಲಿ ಒಟ್ಟು 842 ಸುಸಜ್ಜಿತ ಅಂಗನವಾಡಿ ಕೇಂದ್ರ ನಿರ್ಮಿಸುವ ಗುರಿ ಪೈಕಿ ಸುಮಾರು 588 ಕಾಮಗಾರಿ ಈಗಾಗಲೆ ಮುಕ್ತಾಯ.

## ಗ್ರಾಮ ಬಂಧು ಕಾಲು ಸೇತುವೆ-ಸಂಪರ್ಕ

- ಬಿ.ಎಸ್.ಯಡಿಯೂರಪ್ಪ ಇವರು ಆಯವ್ಯಯದಲ್ಲಿ ಘೋಷಣೆ ಮಾಡಿರುವ 'ಗ್ರಾಮ ಬಂಧು ಸೇತು' ಯೋಜನೆಯಡಿ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ 200 ಕೋಟಿ ರೂ. ಮೊತ್ತದಲ್ಲಿ 1335 ಕಾಲು ಸಂಕಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದೆ.

## ಅವೈಜ್ಞಾನಿಕ ರಸ್ತೆ ತಡೆಗಳಿಗೆ ಮುಕ್ತಿ

- ಸುಗಮ ಸಾರಿಗೆ ಸಂಚಾರಕ್ಕೆ ತೀವ್ರ ಸಮಸ್ಯೆಯಾಗುತ್ತಿದ್ದ 1071 ಅವೈಜ್ಞಾನಿಕ ರಸ್ತೆ ತಡೆಗಳನ್ನು (ರೋಡ್ ಹಂಪ್ಸ್) ತೆರವುಗೊಳಿಸಲಾಗಿದೆ.

## ನೂತನ ವಿಮಾನ ನಿಲ್ದಾಣಗಳ ನಿರ್ಮಾಣ

- ರಾಜ್ಯ ವಿವಿಧ ಪ್ರವಾಸಿ ತಾಣಗಳಿಗೆ ಮತ್ತು ವಾಣಿಜ್ಯ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಲು ಅನುಕೂಲವಾಗುವಂತೆ ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳ ನಿರ್ಮಾಣ ಪ್ರಗತಿಯಲ್ಲಿದೆ.

## ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆ

- ಈ ಸಾಲಿನ ಯೋಜನೆಗಳಲ್ಲಿ ಎಸ್‌ಸಿ-ಎಸ್‌ಟಿ ಜನರು ವಾಸಿಸುವ ಬಡಾವಣೆಗಳಲ್ಲಿ ಕಾಂಕ್ರಿಟ್ ರಸ್ತೆ ನಿರ್ಮಿಸಲು ₹985 ಕೋಟಿ ಬಿಡುಗಡೆ.

## ಪ್ರವಾಸಿ ಧಾಮಗಳಿಗೆ ಸಂಪರ್ಕ

- ಮೈಸೂರಿನ ಚಾಮುಂಡಿ ಬೆಟ್ಟ ಮತ್ತು ಬೆಂಗಳೂರಿನ ಹೊರ ವಲಯದಲ್ಲಿರುವ ನಂದಿಬೆಟ್ಟ ಪ್ರವಾಸಿ ಧಾಮಗಳಲ್ಲಿ ಭೂ ಕುಸಿತದಿಂದ ಹಾನಿಗೊಳಗಾದ ರಸ್ತೆ ಸಂಪರ್ಕಕ್ಕಾಗಿ ವಿಶೇಷ ಯೋಜನೆ. ಇವುಗಳಲ್ಲಿ ನಂದಿಬೆಟ್ಟ ರಸ್ತೆ ನಿರ್ಮಾಣ ಪೂರ್ಣಗೊಂಡಿದೆ.

## ಕೆಆರ್‌ಡಿಸಿಎಲ್ ಕಾಮಗಾರಿಗಳು

- ಬೆಂಗಳೂರು ಸುತ್ತಮುತ್ತ 2095 ಕೋಟಿ ರೂ. ವೆಚ್ಚದಲ್ಲಿ 155 ಕಿ.ಮೀ. ರಸ್ತೆಗಳ ನಿರ್ಮಾಣ ಕಾಮಗಾರಿಗೆ ಚಾಲನೆ. 42 ಪ್ರಮುಖ ಸೇತುವೆಗಳು ಮತ್ತು 67 ಕಿರು ಸೇತುವೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.
- ಸಿಂಧನೂರು-ಯರಮರಸ್ ನಡುವೆ ಮತ್ತು ಮುದಗಲ್- ರಾಯಚೂರು ನಡುವೆ ಪಿಪಿಪಿ (ಖಾಸಗಿ ಸಹಭಾಗಿತ್ವ)ಯಡಿ ಹೆದ್ದಾರಿ ನಿರ್ಮಿಸಲು ಅಗತ್ಯ ಕ್ರಮ.

## ಕೆಶಿಪ್ (Karnataka State Highway Improvement Project)

- ಕೆಶಿಪ್-3ರಡಿ ಸ್ಥಗಿತಗೊಂಡಿದ್ದ ಗದಗ-ಹೊನ್ನಾಳಿ ಹೆದ್ದಾರಿ ಅಭಿವೃದ್ಧಿಗೆ ಮತ್ತೆ ಚಾಲನೆ.
- ಕೆಶಿಪ್-4ರಡಿ ರಾಜ್ಯದ 2943 ಕಿ.ಮೀ. ರಾಜ್ಯ ಹೆದ್ದಾರಿ ಅಭಿವೃದ್ಧಿ ಕೈಗೊಳ್ಳಲು ಸಿದ್ಧತೆ.

## ಎಸ್‌ಡಿಪಿ ಯೋಜನೆ

- ಈ ಯೋಜನೆಯಡಿ ಹಿಂದುಳಿದ ತಾಲೂಕುಗಳಲ್ಲಿ ರಸ್ತೆ ಅಭಿವೃದ್ಧಿಗೆ 290 ಕೋಟಿ ರೂ. ಅನುದಾನ ಹಂಚಿಕೆ.

- ನಬಾರ್ಡ್‌ನಿಂದ ಆರ್‌ಐಡಿಎಫ್ 27ರಡಿ 143 ಕೋಟಿ ರೂ. ಮೊತ್ತದಲ್ಲಿ 23 ಬೃಹತ್ ಮತ್ತು ಮಧ್ಯಮ ಸೇತುವೆ ನಿರ್ಮಾಣಗಳಿಗೆ ಅನುಮೋದನೆ.

## ಮಳೆ ಹಾನಿ: ರಸ್ತೆ ದುರಸ್ತಿ-ಗ್ರಾಮೀಣ ರಸ್ತೆ ಸಂಪರ್ಕಕ್ಕೆ ಕಾಯಕಲ್ಪ

- 2021ನೇ ಸಾಲಿನ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಸಂಭವಿಸಿದ ಅತಿವೃಷ್ಟಿಯಿಂದಾಗಿ ಹಾನಿಯಾದ ರಸ್ತೆ ಮತ್ತು ಸೇತುವೆ, ಕಟ್ಟಡಗಳ ದುರಸ್ತಿಗೆ 610 ಕೋಟಿ ರೂ. ವೆಚ್ಚದಲ್ಲಿ ಹಲವಾರು ಕಾಮಗಾರಿ ಅನುಷ್ಠಾನಗೊಂಡಿವೆ.

## ರಸ್ತೆ ಸಂಪರ್ಕದಲ್ಲಿ ಕರ್ನಾಟಕ ಮಾದರಿ



ಕರ್ನಾಟಕ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಅಭಿವೃದ್ಧಿಗೆ ಇಲ್ಲಿಯ ಸುಸಜ್ಜಿತ ಹೆದ್ದಾರಿಗಳು ಮತ್ತು ಹೆಚ್ಚಿನ ಮೂಲಸೌಲಭ್ಯಗಳು ಕಾರಣ ಎಂದು ಬಿಹಾರದ ರಸ್ತೆ ನಿರ್ಮಾಣ ಸಚಿವ ನಿತಿನ್ ನಬಿನ್ ಪ್ರಶಂಸಿಸಿದರು. ವಿಕಾಸಸೌಧದಲ್ಲಿ ಲೋಕೋಪಯೋಗಿ ಸಚಿವರಾದ ಸಿ.ಸಿ.ಪಾಟೀಲ ಅವರನ್ನು ಭೇಟಿಯಾಗಿ ಕರ್ನಾಟಕದಲ್ಲಿ ಕೈಗೊಳ್ಳುತ್ತಿರುವ ಹೆದ್ದಾರಿ ಮತ್ತು ರಸ್ತೆ ನಿರ್ಮಾಣಗಳ ಯೋಜನೆಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಂಡ ಬಳಿಕ ಅವರು ಅಭಿಪ್ರಾಯ ಹಂಚಿಕೊಂಡರು.